## ಕರ್ನಾಟಕ ಸರ್ಕಾರ–ಸಾರ್ವಜನಿಕ ಶಿಕ್ಷಣ ಇಲಾಖೆ

### ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ದಕ್ಷಿಣ ವಲಯ–01, ಶಂಕರಪುರಂ, ಬೆಂಗಳೂರು–560004

===========================================================

ನಮೂನೆ–3 (ನಿಯಮ–7)

**ಕರ್ನಾಟಕ ಶಿಕ್ಷಣ ಕಾಯಿದೆ ನಿಯಮ 36(6)(ಬಿ)ರಂತೆ ಶಿಕ್ಷಣ ಸಂಸ್ಥೆಗಳ ಮಾನ್ಯತೆ ಪ್ರಮಾಣ ಪತ್ರ**

ಸಂಖ್ಯೆ:ಅ3/ಅನು.ರ.ಪ್ರಾ.ಶಾ.ಮಾ.ನ./179/2018–19 ದಿನಾಂಕ:06.02.2019

**ಹೆಚ್.ಆರ್.ಎಜಕೇಷನಲ್ ಟ್ರಸ್ಟ್ (ರಿ), ನಂ.37/3, ಕೊಮ್ಮಘಟ್ಟ, ಕೆಂಗೇರಿ ಉಪನಗರ, ಬೆಂಗಳೂರು–60** ಇವರ ವತಿಯಿಂದ ನಡೆಯುತ್ತಿರುವ ಸನ್‌ರೈಸ್ ಇಂಟರ್‌ನ್ಯಾಷನಲ್ ಅಕಾಡೆಮಿ, ನಂ.37/3, ಕೊಮ್ಮಘಟ್ಟ, ಕೆಂಗೇರಿ ಉಪನಗರ, **ಬೆಂಗಳೂರು–60** ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಭೇಟಿ ವರದಿ/ಶಿಕ್ಷಣ ಸಂಯೋಜಕರ ವರದಿಯನ್ನು ಆದರಿಸಿ, ಸದರಿ ಶಾಲೆಗೆ ತಾತ್ಕಾಲಿಕ ಮಾನ್ಯತೆಯನ್ನು ಅನುದಾನ ರಹಿತವಾಗಿ (Without-Aid) ಮುಂದಿನ ಆದೇಶದವರೆಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ನಿಬಂಧನೆ ಮೇರೆಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 36(6)(ಬಿ), ಮಾನ್ಯತೆ ನಿಯಮಗಳು 1999ರ ನಿಯಮಗಳನ್ವಯ **ಮಾನ್ಯತೆ** ನೀಡಲಾಗಿದೆ.

| | | |
|---|---|---|
| 1 | ಶಾಲೆಯ ಹೆಸರು ಮತ್ತು ವಿಳಾಸ | **ಸನ್‌ರೈಸ್ ಇಂಟರ್‌ನ್ಯಾಷನಲ್ ಅಕಾಡೆಮಿ,**<br>**ನಂ.37/3, ಕೊಮ್ಮಘಟ್ಟ, ಕೆಂಗೇರಿ ಉಪನಗರ, ಬೆಂಗಳೂರು–60** |
| 2 | ಮಾನ್ಯತೆ ನೀಡಿರುವ ಮಾಧ್ಯಮ | ಆಂಗ್ಲ |
| 3 | ಶಾಲೆ ಅನುದಾನ ಸಹಿತವೇ/ ರಹಿತವೇ | ಅನುದಾನ ರಹಿತ |
| 4 | ಮಾನ್ಯತೆ ನೀಡಿದ ತರಗತಿಗಳು | 6–8ನೇ ತರಗತಿಗೆ 2018–19ನೇ ಸಾಲಿಗೆ ಪ್ರಥಮ ಮಾನ್ಯತೆ<br>1 ರಿಂದ 5ನೇ ತರಗತಿಗೆ 2018–19ನೇ ಸಾಲಿನಿಂದ 2022–23ನೇ ಸಾಲಿಗೆ<br>6–8 ನೇ ತರಗತಿಗೆ 2018–19ನೇ ಸಾಲಿನಿಂದ 2022–23ನೇ ಸಾಲಿಗೆ ಮಾನ್ಯತೆ ನೀಡಿದೆ. |
| 5 | ಮಾನ್ಯತೆ ನೀಡಿದ ವರ್ಷ | **2018–19 ರಿಂದ 2022–23ನೇ ಸಾಲಿನವರೆಗೆ** |
| 6 | ಭೇಟಿ ನೀಡಿದ ಅಧಿಕಾರಿಗಳು | **ಶ್ರೀ ವಿ.ಸಿ.ಬಸವರಾಜೇಗೌಡ**<br>**ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬೆಂಗಳೂರು ದಕ್ಷಿಣ ವಲಯ–01** |
| 7 | ಶುಲ್ಕ ಪಾವತಿ ವಿವರ | **ಚಲನ್ ಸಂಖ್ಯೆ:ಸಿ.ಆರ್0219020200007226**<br>**ದಿನಾಂಕ:04.02.2019** |

**ಷರತ್ತುಗಳು:**

- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕ ಆಕ್ಟ್ 1 ಆಫ್ 1995 ರ ನಿಯಮಗಳು ಹಾಗೂ ಸರ್ಕಾರಿ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ನೀಡುವ ಸುತ್ತೋಲೆ ಹಾಗೂ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: 116 ವಿವಿಧ 95 ದಿನಾಂಕ: 14–11–95 ರ ನಿಯಮ 4, 5, 6 ಮತ್ತು 8 ರನ್ವಯ ಶಾಲಾ ಸುರಕ್ಷತೆ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದಿರತಕ್ಕದ್ದು.
- ಕರ್ನಾಟಕ ಶಿಕ್ಷಣ ಕಾಯ್ದೆ 1983 ಕರ್ನಾಟಕಆಕ್ಟ್ 1 ಆಫ್ 1995 ರ ಕರ್ನಾಟಕ ಶಿಕ್ಷಣ ಸಂಸ್ಥೆಗಳು, ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯವಸ್ತು ನಿಗಧೀಕರಣ ನಿಯಮಾವಳಿಗಳು 1995 ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ 116 ವಿವಿಧ 95 ದಿನಾಂಕ: 14–11–95 ರ ನಿಯಮ 10 ರಂತೆ ಬೋಧನಾ ಶುಲ್ಕ, ವಿಶೇಷ ಅಭಿವೃದ್ಧಿ ಶುಲ್ಕಗಳನ್ನು ಮಾತ್ರ ವಸೂಲಿ ಮಾಡುವುದು. ಹಾಗೂ ನಿಯಮ 19(4) ರಂತೆ ಕ್ರಮ ವಹಿಸುವುದು.
- ಕರ್ನಾಟಕ ರಾಜ್ಯದ ಸಂಘದ ನೊಂದಣಿ ಕಾಯ್ದೆ 21 1960 ಕ್ರಮ ಸಂಖ್ಯೆ 9 1957 ಅಧಿನಿಯಮ 13 ರ ಪ್ರಕರಣದಂತೆ ಹಿಂದಿನ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು ಸಂಘಗಳ ನೊಂದಣಾಧಿಕಾರಿಗಳಿಗೆ ಸಲ್ಲಿಸಿ ದಾಸ್ತಾವೇಜುಗಳನ್ನು ದಾಖಲು ಪಡಿಸುವುದು. ಹಾಗೂ ಸದರಿ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಪಟ್ಟಿಯ ದಾಖಲೆಗಳನ್ನು ಅನುಮೋದಿಸಿಕೊಂಡು ಸ್ವೀಕೃತಿ ಹಾಗೂ ಅನುಮೋದನಾ ಪಟ್ಟಿಯನ್ನು 30 ದಿನಗಳ ಒಳಗಾಗಿ ಈ ಕಛೇರಿಗೆ ಮುದ್ದಾಂ ಸಲ್ಲಿಸುವುದು.
- ಶಿಕ್ಷಣ ಕಾಯ್ದೆ 1983 ಸರ್ಕಾರದ ಅಧಿಸೂಚನೆ ಇಡಿ 131 ವಿವಿಧ 98 ದಿನಾಂಕ: 04–11–99 ರ ಮಾನ್ಯತೆ ನಿಯಮ 1999 ರ ನಿಯಮ 3 ಉಪನಿಯಮ 2 ರಂತೆ ಹಾಗೂ ನಿರ್ದೇಶಕರು ಪ್ರೌಢಶಿಕ್ಷಣ ರವರ ಸುತ್ತೋಲೆ ಸಂಖ್ಯೆ: ಸಿ8(4)(7) ಶಾಶಿಅ ನಿ ಅ 01/02–03 ದಿನಾಂಕ: 13–12–02 ರ ನಿಯಮಗಳಂತೆ ಸ್ಥಿರನಿಧಿ ಠೇವಣಿಗಳನ್ನು ನಿಗಧಿಪಡಿಸಿರುವ ದರಗಳಲ್ಲಿ ಆಡಳಿತ ಮಂಡಳಿ ಕಾರ್ಯದರ್ಶಿಗಳು ಹಾಗೂ ಸೂಚಿತ ಅಧಿಕೃತ ಪ್ರಾಧಿಕಾರದ ಜಂಟಿ ಹೆಸರಿನಲ್ಲಿ ನಿರ್ವಹಿಸಿ ಕಾಲಕಾಲಕ್ಕೆ ನವೀಕರಣ ಮಾಡಿಸುತ್ತಿರಬೇಕು.
- ಸರ್ಕಾರದ ಆದೇಶ ಸಂಖ್ಯೆ: ಇಡಿ 44 ಎಸ್‌ಎಲ್ ಬಿ 2007 ದಿನಾಂಕ: 03–09–2007 ರ ಅನುಬಂಧ 3 ರಲ್ಲಿನ ಚೆಕ್‌ಲಿಸ್ಟ್ ನಂತೆ ಎಲ್ಲಾ ಮಾಹಿತಿ ದಾಖಲೆಗಳನ್ನು ಹೊಂದಿರತಕ್ಕದ್ದು ಹಾಗೂ ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

Scanned by CamScanner

- ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 74 ಪಿಪಿಧ 2004 ಬೆಂಗಳೂರು ದಿನಾಂಕ: 14-08-2006 ರ ಸೂಚನೆಗಳಂತೆ ಲೆಕ್ಕ ಪತ್ರಗಳು, ದಾಖಲೆಗಳನ್ನು ನಿರ್ವಹಿಸುವುದು.
- ಕರ್ನಾಟಕ ಶಿಕ್ಷಣ ಸಂಸ್ಥೆಗಳು ಮಾನ್ಯತೆ ನಿಯಮಗಳು 1999 ಸರ್ಕಾರದ ಅದಿಸೂಚನೆ ಸಂಖ್ಯೆ: ಇಡಿ 131 ಪಿಪಿಧ 98 ದಿನಾಂಕ: 04-11-99 ರ ನಿಯಮ 4 (ಕೆ) ರಂತೆ ಕಿರಿಯ ಪ್ರಾಥಮಿಕ ಶಾಲೆಗಳಿಗೆ 50 ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಿಗೆ 100 ವಿದ್ಯಾರ್ಥಿಗಳ ಕನಿಷ್ಟ ದಾಖಲಾತಿಯನ್ನು ನಿರ್ವಹಿಸಿರುವುದು. ನಿಯಮಗಳಲ್ಲಿ ನಿಗದಿಪಡಿಸಿದ ದಾಖಲಾತಿ/ಹಾಜರಾತಿಗಿಂತ ಕಡಿಮೆ ಇದ್ದು ಪ್ರಸ್ತಾವನೆಯಲ್ಲಿ ಹೆಚ್ಚಿನ ದಾಖಲಾತಿ ತೋರಿಸಿದಲ್ಲಿ ನಿಯಮಾನುಸಾರ ಮಾನ್ಯತೆ ತಂತಾನೆ ರದ್ದಾಗುತ್ತದೆ.
- ಸರ್ಕಾರಿ ಆದೇಶ ಹಾಗೂ ಇಲಾಖಾ ನಿಯಮಾನುಸಾರ ನಿಗಧಿತ ಹಾಗೂ ಅರ್ಹ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಹೊಂದಿದ್ದಲ್ಲಿ ಮಾತ್ರ ಮಾನ್ಯತೆ ಅನ್ವಯಿಸಲಿದ್ದು ನಿಯಮ ಉಲಂಘನೆಯಾದಲ್ಲಿ ಮಾನ್ಯತೆ ತಂತಾನೆ ರದ್ದಾಗುತ್ತದೆ.
- ಶಾಲೆಯಲ್ಲಿ ನೇಮಕಾತಿ ಮಾಡಿಕೊಳ್ಳುವ ಪ್ರತಿಯೊಬ್ಬ ಭೋದಕ/ಬೋದಕೇತರ ಸಿಬ್ಬಂದಿಗೂ ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ.104 ಎಸ್.ಇ.ಪಿ.2005 ದಿ. 12-01-2006 ರ ಸೂಚನೆಗಳನ್ವಯ ಸೇವಾ ವಿವರಗಳನ್ನೊಳಗೊಂಡ ಸೇವಾ ವಹಿಗಳನ್ನು ತೆರೆದು ಕಾಲಕಾಲಕ್ಕೆ ನಮೂದನೆಗಳನ್ನು ನಮೂದಿಸಿ ದೃಢೀಕರಿಸಿರಬೇಕು.
- ಶಿಕ್ಷಕರಿಗೆ ಸರ್ಕಾರಿ ಆದೇಶಗಳಂತೆ ವೇತನಗಳನ್ನು ಬ್ಯಾಂಕ್ ಉಳಿತಾಯ ಖಾತೆಗಳ ಮೂಲಕ ಪಾವತಿ ಮಾಡತಕ್ಕದ್ದು. ಯಾವುದೇ ಕಾರಣಕ್ಕೆ ನಗದು ನೀಡತಕ್ಕದಲ್ಲ. ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಿಬ್ಬಂದಿಯವರಿಗೆ ದಿನಾಂಕ 12.01.2006 ರ ಸರ್ಕಾರದ ಆದೇಶದಂತೆ ಸೇವಾಭದ್ರತೆ ಒದಗಿಸಬೇಕು.
- ಬೆಂಗಳೂರು ನಗರ ಪೋಲಿಸ್ ಆಯುಕ್ತರು, ಇನ್‌ಫೆಂಟ್ರಿರಸ್ತೆ, ಬೆಂಗಳೂರು ರವರ ಆದೇಶ ಸಂಖ್ಯೆ: 157 ಎಂಎಜೆ(1)ಇತರೆ/2014 ದಿನಾಂಕ: 26-07-2014 ರನ್ವಯ ಮಕ್ಕಳ ಸುರಕ್ಷತೆಗೆ ಸಂಬಂದಿಸಿದಂತೆ ಎಲ್ಲಾ ಕ್ರಮಗಳನ್ನು ಅನುಸರಿಸುವುದು. ಇಲಾಖೆ ಗೊತ್ತುಪಡಿಸಿರುವ ಎಲ್ಲಾ ಭೌತಿಕ ಸೌಲಭ್ಯಗಳನ್ನು ಒದಗಿಸುವುದು.
- ಈ ಶಾಲೆ ಪ್ರಾರಂಭವಾದಗಿನಿಂದ ಸಂಸ್ಥೆ ಹಸ್ತಾಂತರ ಹಾಗೂ ಶಾಲೆ ಸ್ಥಳಾಂತರವಾಗಿದ್ದಲ್ಲಿ ಶಿಕ್ಷಣ ಕಾಯ್ದೆಯನುಸಾರ ಸದರಿ ಶಾಲೆಗೆ ಹೊಸದಾಗಿ ನೊಂದಣಿ ಪ್ರಥಮ ಮಾನ್ಯತೇ ಹಾಗೂ ಕಾಲಕಾಲಕ್ಕೆ ಮಾನ್ಯತೆಗಳನ್ನು ಪಡೆದಿದ್ದಲ್ಲಿ ಮಾತ್ರ ಈ ಆದೇಶ ಚಾಲ್ತಿಯಾಗುವುದು. ಈ ಸಂಬಂಧಯಾವುದೇ ನಿಯಮ ಉಲ್ಲಂಘನೆಯಾಗಿದ್ದರೂ ಈ ಮಾನ್ಯತೆ ಆದೇಶ ತಂತಾನೆ ರದ್ದಾಗುತ್ತದೆ.
- ನಿಯಮಾನುಸಾರ ಎಲ್ಲಾ ರೀತಿಯ ಮಕ್ಕಳ ಸುರಕ್ಷಿತಾ ಕ್ರಮಗಳನ್ನು ಕೈಗೊಳ್ಳಬೇಕು.
- ಆರ್.ಟಿ.ಇ. ಅಡಿಯಲ್ಲಿ ಸದರಿ ಶಾಲೆ ನೋಂದಣಿಯಾಗಿರಬೇಕು.
- ಶಾಲಾ ಮಕ್ಕಳಿಗೆ ಯಾವುದೇ ದೈಹಿಕ ದಂಡನೆಗಳನ್ನು ನೀಡಬಾರದು.
- ಅಗ್ನಿನಂದಕಗಳನ್ನು ಅಳವಡಿಸಿರಬೇಕು.
- **ಅನಧಿಕೃತ ತರಗತಿಗಳನ್ನು ಆರಂಭಿಸಿದರೆ ಶಾಲೆಯ ನೊಂದಣಿ ಮತ್ತು ಮಾನ್ಯತೆಯು ತಂತಾನೆ ರದ್ದಾಗುವುದಲ್ಲದೆ ಇಲಾಖೆ ತೆಗೆದುಕೊಳ್ಳುವ ಯಾವುದೇ ಶಿಸ್ತು ಕ್ರಮಕ್ಕೆ ಆಡಳಿತ ಮಂಡಳಿ ಬದ್ಧವಾಗಿರಬೇಕಾಗುತ್ತದೆ.**
- ಶಾಲೆಯ 200 ಮೀಟರ್ ಸುತ್ತಳತೆಯಲ್ಲಿ ಧೂಮಪಾನ ನಿಷೇದ ಪ್ರಕಟಣಾ ಫಲಕವನ್ನು ಕಡ್ಡಾಯವಾಗಿ ಹಾಕಬೇಕು.
- ಶಾಲೆಯ ಮೇಲಿನ ಅಂತಸ್ತುಗಳಿಗೆ ಹೋಗಬೇಕಾದ ಮೆಟ್ಟಲುಗಳು ಕಿರಿದು ಆಗಿರಬಾರದು. ಒಂದು ವೇಳೆ ಪ್ರತಿ ಮಜಲುಗಳಲ್ಲಿ ಸುರಕ್ಷಿತ ಗೋಡೆಗಳನ್ನು ನಿರ್ಮಿಸದಿದ್ದಲ್ಲಿ ಅಥವಾ ತುಂಬಾ ಚಿಕ್ಕದಾದ ಗೋಡೆಗಳನ್ನು ನಿರ್ಮಾಣ ಮಾಡಿದ್ದಲ್ಲಿ ಈ ಬಗ್ಗೆ ಜಾಗರೂಕತಾ ಕ್ರಮ ಕೈಗೊಳ್ಳಬೇಕು. ಕೊನೆಯ ಪಕ್ಷ 5 ಅಡಿ ತಡೆ ಗೋಡೆಗಳು ಇರುವಂತೆ ನೋಡಿಕೊಳ್ಳಬೇಕು. ಗಾಳಿ ಬೆಳಕಿನ ವ್ಯವಸ್ಥೆಗೆ ಅಡ್ಡಿ ಉಂಟಾಗದಂತೆ ಗ್ರಿಲ್‌ಗಳನ್ನು ಅಳವಡಿಸಬೇಕು.
- ಈ ಶಾಲೆಗೆ ಮಾನ್ಯತೆಯನ್ನು ಆರ್.ಟಿ.ಇ.ಅಡಿಯಲ್ಲಿ ದಾಖಲಾಗಿ ಓದುತ್ತಿರುವ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಮಾನ್ಯತೆಯನ್ನು ತಾತ್ಕಲಿಕವಾಗಿ ನವೀಕರಿಸಿದೆ.
- ಶಾಲೆಗೆ ಕೊಡಬೇಕಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು. ಇಲ್ಲವಾದರೆ ಈ ಆದೇಶ ತಂತಾನೆ ರದ್ದಾಗುವುದು.

[ವಿ.ಸಿ.ಬಸವರಾಜೇಗೌಡ]
ಕ್ಷೇತ್ರ ಶಿಕ್ಷಣಾಧಿಕಾರಿಗಳು
ಬೆಂಗಳೂರು ದಕ್ಷಿಣ ವಲಯ-01
ಶಂಕರಪುರ, ಬೆಂಗಳೂರು-560 004.

ರವರಿಗೆ:

1. ಗೌರವಪೂರ್ವಕವಾಗಿ, ಉಪನಿರ್ದೇಶಕರು, ಸಾ.ಶಿ.ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಬೆಂಗಳೂರು ರವರ ಅವಗಾಹನೆಗೆ
2. **ಕಾರ್ಯದರ್ಶಿಗಳು/ಮುಖ್ಯಶಿಕ್ಷಕರು, ಸನ್‌ರೈಸ್ ಇಂಟರ್‌ನ್ಯಾಷನಲ್ ಅಕಾಡೆಮಿ, ನಂ.37/3, ಕೊಮ್ಮಘಟ್ಟ, ಕೆಂಗೇರಿ ಉಪನಗರ, ಬೆಂಗಳೂರು-60**
3. ಕಛೇರಿ ಪ್ರತಿ.

Scanned by CamScanner